ತರಬೇತಿಯನ್ನು ನೀಡಲಾಗಿದೆ. ಅಲ್ಲದೆ, ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಕರಪತ್ರಗಳ ಮೂಲಕ ಪೊಲೀಸರಿಂದ ಮಾಹಿತಿಯನ್ನು ಸಹ ನೀಡಲಾಗುತ್ತಿದೆ.

In co-ordination with various departments, the police are attending to the basic problems of naxal prone areas. Computer training was provided to the youths in co-operation with the Zilla Panchayath. Pamphlets/handbills containing information reguarding development programmes are being distributed to the public to educate them.

283 ಶ್ರೀ ನಾಡಗೌಡ ವೆಂಟಕರಾವ್(ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಕೆಶಿಫ್ ಸಂಸ್ಥೆಯಡಿಯಲ್ಲಿ 2ನೇ ಹಂತಕ್ಕೆ ಸಂಬಂಧಪಟ್ಟಂತೆ ಕಾಮಗಾರಿಗಳ ಪ್ರಸ್ತಾವನೆಯನ್ನು ವಿಶ್ವ ಬ್ಯಾಂಕಿಗೆ ಯಾವಾಗ ಕಳುಹಿಸಲಾಗಿದೆ ಹಾಗೂ ಅಲ್ಲಿಂದ ಯಾವಾಗ ಅನುಮೋದನೆ ಪಡೆದುಕೊಳ್ಳಲಾಗಿದೆ; (ಉಲ್ಲೇಖಗಳಗೊಂಡ ವಿವರಗಳನ್ನು ಒದಗಿಸುವುದು);

ಆ) ಈ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ಅನುಮೋದನೆ ಪಡೆದುಕೊಂಡ ನಂತರ 2008–09, 2009–10 ಹಾಗೂ 2010–11 ರ ಸಾಲಿಗೆ ತೆಗೆದುಕೊಳ್ಳಲು ನಿಯೋಜಿಸಲಾದ ಕಾಮಗಾರಿಗಳ ಹಾಗೂ ಈ ಕಾಮಗಾರಿಗಳಿಗೆ ನಿಗಧಿಪಡಿಸಿದ ಹಣವೆಷ್ಟು; (ವಿವರ ನೀಡುವುದು);

ಇ) ಈ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ವಿಶ್ವಬ್ಯಾಂಕ್ ಅನುಮೋದನೆ ನೀಡಿ ನಿಗಧಿಪಡಿಸಿದ ಕಾಮಗಾರಿಗಳನ್ನು ಬದಲಾವಣೆ ಮಾಡಿರುವ ಪ್ರಕರಣಗಳು ಇದೆಯೇ ಹಾಗೂ ಬದಲಾವಣೆಗೆ ವಿಶ್ವಬ್ಯಾಂಕಿನ ಅನುಮೋದನೆ ದೊರಕಿದೆಯೇ; ಇದ್ದಲ್ಲಿ ತಾಂತ್ರಿಕ ಸಕಾರಣಗಳನ್ನು ಒಳಗೊಂಡ ವಿವರಗಳನ್ನು ಒದಗಿಸುವುದು ಬದಲಾವಣೆ ಪ್ರಕ್ರಿಯೆಯಿಂದ ಕಾಲವ್ಯಯವಾಗಿ ನಿಗಧಿಪಡಿಸಲಾದ ಅನುದಾನವನ್ನು ಬಳಕೆ ಮಾಡಲಾಗದೇ ಲ್ಯಾಪ್ಸ್ ಆಗಿರುವುದು ನಿಜವೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೆಶಿಫ್–2ನೇ ಹಂತದ ಯೋಜನೆಗೆ ವಿಶ್ವ ಬ್ಯಾಂಕಿನ ಆರ್ಥಿಕ ನೆರವನ್ನು ಕೋರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸರ್ಕಾರದ ಪತ್ರ ಸಂಖ್ಯೆ

PWD 104 EAP 2007 ದಿನಾಂಕ: 03–07–2007 ರಲ್ಲಿ ಕಳುಹಿಸಲಾಯಿತು. ಕೇಂದ್ರ ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ 1/03/2007–FB. VI ದಿನಾಂಕ: 03–10–2007ರ ಪತ್ರದಲ್ಲಿ US $ 200 ಮಿಲಿಯನ್‌ಗಳ ನೆರವನ್ನು ವಿಶ್ವಬ್ಯಾಂಕಿಗೆ ಶಿಫಾರಸ್ಸು ಮಾಡಲಾಗಿದ್ದು ನಂತರ ಕೇಂದ್ರ ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ 1/03/2007–FB. VI ದಿನಾಂಕ: 25–02–2008ರ ಪತ್ರದಲ್ಲಿ ನೆರವನ್ನು US $ 300 ಮಿಲಿಯನ್ ಹೆಚ್ಚಿಸಲು ವಿಶ್ವಬ್ಯಾಂಕಿಗೆ ಶಿಫಾರಸ್ಸು ಮಡಿರುತ್ತದೆ. ಅದರಂತೆ ವಿಶ್ವಬ್ಯಾಂಕ್ ಯೋಜನೆಗೆ US $ 300 ಮಿಲಿಯನ್ ನೆರವನ್ನು ನೀಡಲು ತಾತ್ವಿಕವಾಗಿ ಒಪ್ಪಿರುತ್ತದೆ. ಕಾಮಗಾರಿಗಳು ಇನ್ನು ಅನುಮೋದನೆಯಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯ ಸಚಿವ ಸಂಪುಟದ ಅನುಮೋದನೆಯಂತೆ 3411 ಕಿ.ಮೀ.ಗಳನ್ನು ಅಭಿವೃದ್ಧಿ ಪಡಿಸಲು ತಿರ್ಮಾನಿಸಲಾಗಿದೆ. ಕೇಂದ್ರ ಸರ್ಕಾರದ ಶಿಫಾರಸಿನಂತೆ US $ 300 ಮಿಲಿಯನ್‌ನ ಅನುದಾನದಲ್ಲಿ 826 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ವಿಶ್ವಬ್ಯಾಂಕ್ ತಾತ್ವಿಕವಾಗಿ ಒಪ್ಪಿರುತ್ತದೆ.

280 ಶ್ರೀ ಶ್ರೀನಿವಾಸ್.ಎಂ(ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿನ ಕೆಶಿಪ್ ಸಂಸ್ಥೆಯಡಿಯಲ್ಲಿ ಕೆಶಿಪ್ 2ನೇ ಹಂತಕ್ಕೆ ಸಂಬಂಧಪಟ್ಟಂತೆ ಅನುಮೋದನೆಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ಹಾಗೂ ಅಂದಾಜು ಮೊತ್ತವೆಷ್ಟು (ಕಾಮಗಾರಿಗಳ ವಿವರಗಳನ್ನು ಒದಗಿಸುವುದು);

ಆ) ಈ ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನೊಳಗೊಂಡ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆ ಎಂದು ನೀಡಲಾಯಿತು; ಸಚಿವ ಸಂಪುಟ ಅನುಮೋದನೆ ಪಡೆಯಲಾದ ಮೂಲ ಪ್ರಸ್ತಾವನೆಯಲ್ಲಿನ ಕಾಮಗಾರಿಗಳನ್ನು ಬದಲಾಯಿಸುವ ಪ್ರಕರಣಗಳು ಇವೆಯೇ (ವಿವರಗಳನ್ನು ಒದಗಿಸುವುದು);

ಇ) ಈ ಯೋಜನೆಯಡಿಯಲ್ಲಿ ಕಾಮಗಾರಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಲಾಗಿದೆ ಹಾಗೂ ಅಲ್ಲಿಂದ ಯಾವಾಗ ಅನುಮೋದನೆ ಪಡೆದುಕೊಳ್ಳಲಾಗಿದೆ (ಉಲ್ಲೇಖಗಳನ್ನೊಳಗೊಂಡ ವಿವರಗಳನ್ನು ಒದಗಿಸುವುದು);